<u>ಸಾಕ್ಷಿಯನ್ನು ದಿಃ**04.09.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಯು.ಎಸ್. ವಕೀಲರಿಂದ:</u>

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಗಳ ಊರು ದೊಡ್ಡಮಾವತ್ತೂರು. ವಾದಿಯು ಮೂಲತಃ ಭಾವಸಂದ್ರದವರಾಗಿದ್ದು ಅವರು ತಾತನ ಕಾಲದಿಂದಲೂ ನಮ್ಮ ಮನೆಯ ಬಳಿಗೆ ಬಂದು ಸೇರಿಕೊಂಡಿರುತ್ತಾರೆ. ಸದರಿ ಭಾಗವಸಂದ್ರ ಕಸಬ ಹೋಬಳಿಗೆ ಬರುತ್ತದೆ. ನಮ್ಮ ಊರು ಹುಲಿಯೂರುದುರ್ಗ ಹೋಬಳಿಗೆ ಸೇರಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ವಿಚಾರಗಳು ನನಗೆ ಗೊತ್ತು. ವಾದಿ ದಾವಾ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದಾರೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ವಾದಿಯು ಚಿಕ್ಕ ಮಾವತ್ತೂರಿನವರು ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಚಿಕ್ಕಮಾವತ್ತೂರಿನವರಲ್ಲ. ವಾದಿಯ ಜೀವನೋಪಾಯಕ್ಕಾಗಿ ಚಿಕ್ಕಮಾವತ್ತೂರನ್ನು ಬಿಟ್ಟು ಬೋಳೆನಹಳ್ಳಿಗೆ ಬಂದು ವಾಸವಿದ್ದಾರೆ ಎಂದು ನಾನು ಬರೆಸಿರುವುದಿಲ್ಲ. 1 ನೇ ಪ್ರತಿವಾದಿಗೆ 3 ಜನ ಮಕ್ಕಳು. 1 ನೇ ಪ್ರತಿವಾದಿಯ ಗಂಡನ ಹೆಸರು ನಂಜಪ್ಪ. ವಾದಿಯ ತಂದೆಯ ಹೆಸರು ಚೋಟಯ್ಯ. ಸರ್ವೇ ನಂ.2 ರಲ್ಲಿ 18 ½ ಎಕರೆ ಇರುತ್ತದೆ. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿಯ ಗಂಡನಿಗೆ ಮಂಜೂರಾಗಿರುತ್ತದೆ. ಸದರಿ ಜಮೀನಿನ

ಬೇರೆ ಯಾರಿಗಾದರೂ ಮಂಜೂರಾಗಿದೆ ಎಂದರೆ ಸಾಕ್ಷಿಯು ತಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಕುರಿತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ.

ದಾವಾ ಆಸ್ತಿಯ ಮಂಜೂರಾತಿಗೆ ವಾದಿ ಯಾವಾಗ ಅರ್ಜಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿ ಮನೆ ಕಟ್ಟಿದ್ದು, ರಾಗಿ, ತೇಗದ ಮರಗಳನ್ನು ಬೆಳೆಸಿದ್ದಾರೆ. ದಾವಾ ಆಸ್ತಿಗೆ ವಾದಿಯ ಹೆಸರಿನಲ್ಲಿ ಖಾತೆ ಆಗಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾನು ಹೇಳುವ ಬೆಳೆಗಳು ಇವೆಯೇ ಎಂದು ತೋರಿಸಲು ನ್ಯಾಯಾಲಯದಿಂದ ಆಯುಕ್ತಕರನ್ನು ನೇಮಿಸಲು ತೊಂದರೆ ಇಲ್ಲ. ವಾದಿ ದಾವಾ ಆಸ್ತಿಯ ಕುರಿತು ಸಲ್ಲಿಸಿದ ಅರ್ಜಿಯನ್ನು ನಾನು ನೋಡಿರುತ್ತೇನೆ. ಮಂಜಯ್ಯ ಬಿನ್ ಚೋಟಯ್ಯ ಎಂದು ಯಾರು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನಿಪಿ.4 ರಂತೆ ವಾದಿ ಉಳುಮೆ ಮಾಡುತ್ತಿಲ್ಲ ಎಂದು ಅವರ ಖಾತೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣದ ಮನೆ ಇದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ 4-5 ಜನ ಅಣ್ಣ-ತಮ್ಮಂದಿರು ಇದ್ದಾರೆ ಎಂದರೆ ಸರಿ. ಅವರು ಭಾವಸಂದ್ರದಲ್ಲಿದ್ದಾರೆ ಎಂದರೆ ಸರಿ. ವಾದಿಯು ತಾನು ಅಂಗವಿಕಲ ಸೌಲಭ್ಯ ಪಡೆಯಲು ಭಾವಸಂದ್ರದವರು ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹೇಳಿಕೊಂಡಿರಬಹುದು ಅವರು ಬೋಳೆನಹಳ್ಳಿಯಲ್ಲಿ ವಾಸವಿರುತ್ತಾರೆ ಎಂದು

ನುಡಿಯುತ್ತಾರೆ. ವಾದಿ ಭಾವಸಂದ್ರದಲ್ಲೇ ವಾಸವಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಉಳುಮೆ ಮಾಡದೇ ಇದ್ದರೂ ಬೇರೆ ಆಸ್ತಿಯ ಫೋಟೋ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹಾಗೂ 1 ನೇ ಪ್ರತಿವಾದಿಯ ಆಸ್ತಿಯನ್ನು ಸರ್ವೆ ಮಾಡಿಸಿದ್ದರು ಎಂದರೆ ಸಬ್ ಇನ್ಸಪೆಕ್ಟರ್ ಬಂದು ಅಳತೆ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಅಳತೆ ಮಾಡಿಸಿದ ದಿನಾಂಕ ನನಗೆ ನೆನಪಿಲ್ಲ. ಪ್ರತಿವಾದಿಗಳಿಗೆ ವಾದಿ ತೊಂದರೆ ನೀಡಿದ್ದು ಆ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೋಳೆನಹಳ್ಳಿ ಗ್ರಾಮದ ವಾಸಿನು ಅಲ್ಲ, ದೊಡ್ಡಮಾವತ್ತೂರಿನ ವಾಸಿಯು ಅಲ್ಲ ಎಂದರೆ ಸರಿ. ನಾನು ಬೋಳೆನಹಳ್ಳಿಯಲ್ಲಿ ಜಮೀನನ್ನು ಹೊಂದಿರುತ್ತೇನೆ. 1 ನೇ ಪ್ರತಿವಾದಿ ತನ್ನ ಗಂಡನಿಗೆ ಮಂಜೂರಾದ ಆಸ್ತಿಯಲ್ಲಿ ಶಾಂತಿಯುತ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಿಧವೆಯಾಗಿದ್ದ ಕಾರಣ ಅವರಿಗೆ ತೊಂದರೆ ಕೊಡುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 5-6 ವರ್ಷದಿಂದ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯವರ ಆಸ್ತಿಗೆ ವಾದಿ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ಯಾವುದೇ ವಿಚಾರ ತಿಳಿಯದೇ ಇದ್ದರೂ ವಾದಿಗೆ ಅನೂಕೂಲವಾಗಲೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ಬಗರ್ ಹುಕುಂ ಕಮೀಟಿಯ ಆದೇಶವಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.